**IN THE COURT OF THE SENIOR CIVIL JUDGE AND JMFC, TIPTUR.**

**CC No. 706/2023** **CW-15**
**PW-8**

**The Witness is Administered Oath on 05.11.2025**

| | | |
|---|---|---|
| **Witness Name** | : | **Drakshayini** |
| **Husband Name** | : | **Shashidhar** |
| **Age** | : | **53 years** |
| **Occupation** | : | **PSI of C.N Halli PS** |
| **Address** | : | **C.N Halli** |

**Chief Examination: By Assistant Public Prosecutor:-**

ನಾನು ಕಳೆದ 2019 ರಿಂದ 2023 ರವರೆಗೆ ತಿಪಟೂರು ನಗರ ಠಾಣೆಯಲ್ಲಿ ಪೊಲೀಸ್ ಉಪ ನಿರೀಕ್ಷಕಳಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 28.06.2023 ರಂದು ಸಂಜೆ 5 ಗಂಟೆ ಸಮಯದಲ್ಲಿ ಚಾಸಾ-1 ರವರು ಠಾಣೆಗೆ ಹಾಜರಾಗಿ ಗಣಕೀಕೃತ ದೂರು ಮತ್ತು 2 ಸಾಲುಗಳು ಕೈ ಬರಹದಿಂದ ಬರೆದುಕೊಂಡು ಬಂದು ನೀಡಿದ್ದು ಅದನ್ನು ಪಡೆದು ಠಾ.ಮೊ. 115/2023 ರಲ್ಲಿ ಪ್ರಕರಣ ದಾಖಲಿಸಿಕೊಂಡು ಪ್ರಕರಣ ದಾಖಲಿಸಿ ಪ್ರ.ವ. ವರದಿಯನ್ನು ನ್ಯಾಯಾಲಯಕ್ಕೆ ನೀವೇದಿಸಿರುತ್ತೇನೆ. ದೂರು ನಿಪಿ-1 ಎಂದು ಆಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಪ್ರ.ವ. ವರದಿಯನ್ನು ನಿಪಿ-20 ಎಂದು ಸಾಕ್ಷಿಯ ಸಹಿಯನ್ನು ನಿಪಿ-20(ಎ) ಎಂದು ಗುರುತಿಸಲಾಯಿತು. ಸದರಿ ಪ್ರಕರಣವು ವರದಕ್ಷಿಣೆ ಕಿರುಕುಳಕ್ಕೆ ಸಂಬಂಧಿಸಿದ ಪ್ರಕರಣವಾಗಿದ್ದರಿಂದ ನಾನು ನಮ್ಮ ಠಾಣೆಯ ಇನ್-ಚಾರ್ಜ್ ಅಧಿಕಾರಿಯಾಗಿದ್ದ ಗ್ರಾಮಾಂತರ ಸಿಪಿಐ ರವರಿಗೆತಿಳಿಸಿದ್ದು ಸದರಿಯವರು ತನಿಖೆಯನ್ನು ಮುಂದುವರೆಸಲು ಜ್ಞಾಪನವನ್ನು ನೀಡಿರುತ್ತಾರೆ. ಅದನ್ನು ನಿಪಿ-21 ಎಂದು ಗುರುತಿಸಲಾಯಿತು. ಅದೇ ದಿವಸ ಸಂಜೆ 5-45 ರಿಂದ 6-30 ಗಂಟೆವರೆವಿಗೂ ಚಾಸಾ-1 ರವರು ಹಾಜರು ಇದ್ದು ತೋರಿಸಿದ ಕೃತ್ಯ

ಸ್ಥಳದ ಪಂಚನಾಮೆಯನ್ನು ಪಂಚರಾದ ಚಾಸಾ-9 ಮತ್ತು 10 ರವರ ಸಮಕ್ಷಮ ನಿಪಿ-2 ನ್ನು ಬರೆದಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ನಿಪಿ-3 ಮತ್ತು 4 ಫೋಟೋ ಸಹ ತೆಗೆದಿರುತ್ತೇನೆ. ಚಾಸಾ-2 ರಿಂದ 6 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಆರೋಪಿ 1 ರವರಿಗೆ ವಿಚಾರಣೆಗೆ ಹಾಜರಾಗಲು ನೋಟೀಸನ್ನು ಕೊಟ್ಟಿರುತ್ತೇನೆ. ಪಿರ್ಯಾದಿಗೆ ಮದುವೆಗೆ ಸಂಬಂಧಪಟ್ಟಂತಹ ದಾಖಲೆಗಳನ್ನು ಹಾಜರು ಪಡಿಸಲು ನಿಪಿ-5 ರಂತೆ ನೋಟೀಸನ್ನು ಕೊಟ್ಟಿರುತ್ತೇನೆ. ಚಾಸಾ-1 ರವರಿಗೆ ತೊಂದರೆ ಕೊಡುವ ಸಂಭವ ಇದ್ದ ಕಾರಣ ಜಿಲ್ಲಾ ಪೊಲೀಸ್ ಅಧೀಕ್ಷಕರ ಅನುಮತಿ ಪಡೆದು ಆರೋಪಿಯನ್ನು ಬಂಧಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ-22 ಮತ್ತು 23 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಗಳನ್ನು ನಿಪಿ-22(ಎ) ಮತ್ತು 23(ಎ) ಎಂದು ಗುರುತಿಸಲಾಯಿತು. ಆರೋಪಿ 1 ರವರನ್ನು ದಸ್ತಗಿರಿ ಮಾಡಿ ದಸ್ತಗಿರಿ ಕ್ರಮ ಜರುಗಿಸಿ ನ್ಯಾಯಾಲಯಕ್ಕೆ ಸಿಬ್ಬಂಧಿಯೊಂದಿಗೆ ಹಾಜರು ಪಡಿಸಿರುತ್ತೇನೆ. ದಿಃ 30.06.2023 ರಂದು ಮುಂದಿನ ತನಿಖೆಗಾಗಿ ಕಡತಗಳನ್ನು ಚಾಸಾ-16 ರವರಿಗೆ ವರ್ಗಾಯಿಸಿರುತ್ತೇನೆ. ನಾನು ಬಂಧಿಸಿದ ಆರೋಪಿ 1 ರವರು ನ್ಯಾಯಾಲಯದ ಮುಂದೆ ಇರುವ ವ್ಯಕ್ತಿಯಾಗಿರುತ್ತಾರೆ.

## Cross examination by: Sri. C.V counsel for accused:-

ದೂರು ಕೊಡಲು ಚಾಸಾ-1 ರವರು ಸಂಜೆ 5 ಗಂಟೆಗೆ ಬಂದಿದ್ದರು. ಅವರ ಜೊತೆಯಲ್ಲಿ ಅವರ ಅಣ್ಣ ಬಂದಿದ್ದರು. ದೂರು ತಯಾರು ಮಾಡಿಕೊಂಡು ಬಂದಿದ್ದರು. ನಾನು ಚಾಸಾ-1 ರವರಿಗೆ ದೂರಿನ ಸಾರಾಂಶ ಓದಿ ಹೇಳಿಲ್ಲ. ಪ್ರ.ವ.ವ ಪ್ರಕ್ರಿಯೆಯು 5-30 ಗಂಟೆ ಒಳಗೆ ಮುಗಿದಿತ್ತು. ಇಂತಹ ಪ್ರಕರಣಗಳಲ್ಲಿ ಪ್ರಕರಣ ದಾಖಲು ಮಾಡುವ ಮೊದಲು ಸಿಡಿಪಿಓ ಕಛೇರಿಗೆ ಕಳುಹಿಸಿ ಕೊಡಬೇಕೆನ್ನುವ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ಇದೆ ಎಂದರೆ ನಿಜ. ಸಾಕ್ಷಿಯು ಈ ಹಿಂದೆ ದೂರು ದಾಖಲಿಸಿ ಎನ್.ಸಿ ಆಗಿದ್ದ ಕಾರಣ ಸಿಡಿಪಿಓ ಕಛೇರಿಗೆ ಕಳುಹಿಸಿರಲಿಲ್ಲ ಎಂದು ಹೇಳುತ್ತಾರೆ. ದೂರು ಕೊಡುವ ಸಮಯಕ್ಕೆ ಆರೋಪಿ 1

ಮತ್ತು ಚಾಸಾ-1 ರವರ ನಡುವೆ ಸುಮಾರು 15 ವರ್ಷಗಳ ಹಿಂದೆ ಮದುವೆ ಆಗಿತ್ತು. ದೂರು ದಾಖಲಿಸುವ ಸಮಯದಲ್ಲಿ ನಾನು ಎನ್.ಸಿ ಆದ ಬಗ್ಗೆ ದಾಖಲಾತಿಗಳನ್ನು ನೋಡಿರುತ್ತೇನೆ. ಹಿಂದಿನ ದೂರಿನಲ್ಲಿ ಆರೋಪಿ 1 ರಿಂದ 4 ರವರು ಚಾಸಾ1 ರವರಿಗೆ ಮಾನಸಿಕ ಮತ್ತು ದೈಹಿಕ ಕಿರುಕುಳ ಮತ್ತು ವರದಕ್ಷಿಣೆ ಕಿರುಕುಳ ಕೊಟ್ಟ ಬಗ್ಗೆ ಉಲ್ಲೇಖ ಇರಲಿಲ್ಲ. ಹಿಂದಿನ ಎನ್.ಸಿ ಪ್ರಕರಣ ಸಂಖ್ಯೆ 17/2014 ಆದ 9 ವರ್ಷಗಳ ನಂತರ ನಿಪಿ-1 ದೂರನ್ನು ಈ ಪ್ರಕರಣದಲ್ಲಿ ಕೊಡಲಾಗಿದೆ. ಆ ಪ್ರಕರಣ ಆದ ಬಳಿಕ ದೂರು ದಾಖಲು ಮಾಡುವವರೆವಿಗೂ ಬಾಡಿಗೆ ಮನೆಯಲ್ಲಿ ಅವರಿಬ್ಬರೂ ವಾಸ ಇದ್ದರು ಎಂದು ತಿಳಿದು ಬಂದಿತ್ತು. ಅವರು ಎಷ್ಟು ಮನೆಗಳು ಬದಲಾವಣೆ ಮಾಡಿದ್ದರು ಎಂದು ನಾನು ಕೇಳಿರಲಿಲ್ಲ.

ಆರೋಪಿ 1 ರವರಿಗೆ ನಾನು ಮಹಜರ್ ಗೆ ಹೋಗುವ ಸಮಯದಲ್ಲಿ ಸಿ.ಆರ್.ಪಿ.ಸಿ ಕಲಂ. 41 ರ ಅಡಿಯಲ್ಲಿ ಜಾರಿ ಮಾಡಿರುತ್ತೇನೆ. ನಾನು ರಾತ್ರಿ 8 ಗಂಟೆ ಸಮಯದಲ್ಲಿ ಆತನನ್ನು ವಶಕ್ಕೆ ಪಡೆದಿರುತ್ತೇನೆ. ಆತನ ಹೇಳಿಕೆಯನ್ನು ನಾನು ಪಡೆದುಕೊಂಡಿರುವುದಿಲ್ಲ. ಆತನ ವಕೀಲರಿಗೆ ತಿಳಿಸಲು ಸಮಯ ಕೊಟ್ಟಿರುತ್ತೇನೆ. ನಾನು ರಾತ್ರಿ 8 ಗಂಟೆಗೆ ವಶಕ್ಕೆ ಪಡೆದ ಬಳಿಕ ತಕ್ಷಣ ವೈದ್ಯಕೀಯ ಪರೀಕ್ಷೆಗೆ ಕಳುಹಿಸಿ ನ್ಯಾಯಾಧೀಶರ ಮುಂದೆ ಹಾಜರು ಪಡಿಸಲು ಕಳುಹಿಸಿ ಕೊಟ್ಟಿರುತ್ತೇನೆ. ನಾನು ನೋಟೀಸು ಜಾರಿ ಮಾಡಿದ ಬಳಿಕ ಆತ ಠಾಣೆಗೆ ಬಂದಿದ್ದು ಆತನನ್ನು ಠಾಣೆಯಲ್ಲಿಯೇ ನಾನು ಬಂಧಿಸಿರುತ್ತೇನೆ. ದೂರುದಾಖಲು ಮಾಡುವ ಸಮಯದಲ್ಲಿ ಐಪಿಸಿ ಕಲಂ. 498(ಎ), 506, ಸಹವಾಚಕ ಕಲಂ. 34 ಐಪಿಸಿ ಮತ್ತು ಡಿಪಿ ಕಾಯ್ದೆ ಕಲಂ. 3. ಮತ್ತು 4 ನ್ನು ಅಳವಡಿಸಿರುತ್ತೇನೆ. ನಾನು ಡಿಪಿ ಕಾಯ್ದೆ ಕಲಂ. 6(1)(ಬಿ) ಅಳವಡಿಸಲು ಮನವಿ ಮಾಡಿಕೊಂಡಿಲ್ಲ. ನಿಪಿ-12 ಹೇಳಿಕೆಯಲ್ಲಿ ಡಿಪಿ ಕಾಯ್ದೆ ಕಲಂ. 6(1)(ಬಿ) ನಾನು ಸೇರಿಸಿರುವುದಿಲ್ಲ. ಚಾಸಾ2 ರಿಂದ 6 ರವರ ಹೇಳಿಕೆಗಳಲ್ಲಿ ಡಿಪಿ ಕಾಯ್ದೆ ಕಲಂ. 6(1)(ಬಿ) ನ್ನು ಅಳವಡಿಸಲಾಗಿದೆ ಎಂದರೆ ಕೈತಪ್ಪಿನಿಂದ ಆ ರೀತಿ ಆಗಿದೆ ಎಂದು ಹೇಳುತ್ತಾರೆ.

ನಮ್ಮ ಠಾಣೆಯಿಂದ ಚಾಸಾ-1 ರವರ ಮನೆ 3 ಕಿ.ಮೀ ಅಂತರದಲ್ಲಿದೆ. ದೂರು ದಾಖಲಾದ ಬಳಿಕ ಮಹಜರ್ ಮಾಡಲು, ಆರೋಪಿಯವರಿಗೆ ನೋಟೀಸು ನೀಡಲು ಮತ್ತು ಸಾಕ್ಷಿ 2 ರಿಂದ 6 ರವರ ಹೇಳಿಕೆ ಪಡೆಯಲು ಮತ್ತು ಮೇಲಾಧಿಕಾರಿಗಳ

ಅನುಮತಿಗಳನ್ನು ಪಡೆಯಲು ಸುಮಾರು 4 ಗಂಟೆ ಕಾಲ ತೆಗೆದುಕೊಂಡಿರುತ್ತೇನೆ. ನಾನು ನಮ್ಮ ಜಿಲ್ಲಾ ಪೊಲೀಸ್ ಅಧೀಕ್ಷಕರಿಗೆ ಪ್ರಕರಣ ದಾಖಲಾದ ತಕ್ಷಣ ಸಿಪಿಐ ರವರ ಅನುಮತಿ ಪಡೆದ ಬಳಿಕ ಅವರ ಅನುಮತಿಯನ್ನು ಕೇಳಿಕೊಂಡಿರುತ್ತೇನೆ. ಆಗ ಸುಮಾರು 5-35 ರಿಂದ 5-40 ಗಂಟೆ ಸಮಯ ಆಗಿತ್ತು. ಜಿಲ್ಲಾ ಅಧೀಕ್ಷಕರಿಂದ ನನಗೆ ಸುಮಾರು 6-30 ಗಂಟೆ ಸಮಯದಲ್ಲಿ ಆರೋಪಿ 1 ರವರನ್ನು ಬಂಧಿಸಲು ಅನುಮತಿ ಬಂದಿತ್ತು. ನಾನು ಆರೋಪಿ 1 ರವರನ್ನು ಬಂಧಿಸಿದ ಬಳಿಕ ಚಾಸಾ-2 ರಿಂದ 6 ರವರ ಹೇಳಿಕೆ ಪಡೆದಿರುತ್ತೇನೆ. ನಾನು ಜಿಲ್ಲಾ ಪೊಲೀಸ್ ಅಧೀಕ್ಷಕರಿಗೆ ಅನುಮತಿ ಕೇಳುವ ಸಮಯದಲ್ಲಿ ದೂರಿನ ಅಂಶಗಳು ಅಲ್ಲದೆ ಬೇರೆ ಸಾಕ್ಷಿಗಳ ಯಾವುದೇ ಹೇಳಿಕೆಗಳು ಆರೋಪಿ 1 ರವರ ವಿರುದ್ಧ ಇರಲಿಲ್ಲ. ನಾನು ಜಿಲ್ಲಾ ಪೊಲೀಸ್ ಅಧೀಕ್ಷಕರಿಗೆ ಮನವಿ ಪತ್ರ ಬರೆಯುವಾಗ ಸಾಕ್ಷಿಗಳ ಹೇಳಿಕೆ ಪಡೆದಿರುವ ಬಗ್ಗೆ ನಮೂದು ಮಾಡಿದ್ದೇನೆ ಎಂದರೆ ಸಾಕ್ಷಿಯು ಸುಮಾರು 2 ವರ್ಷಗಳು ಆಗಿರುವ ಕಾರಣ ನನಗೆ ಈಗ ಅದು ನೆನಪಿರುವುದಿಲ್ಲ ಎಂದು ಹೇಳುತ್ತಾರೆ.

ನಿಪಿ-2 ಮಹಜರ್ ಯಾರು ಬರೆದಿದ್ದರು ಎಂದು ನಮೂದು ಮಾಡಿರುವುದಿಲ್ಲ. ಮಹಜರ್ ಮಾಡಲು ಸ್ಥಳೀಯ ಗೌರವಾನ್ವಿತ ವ್ಯಕ್ತಿಗಳಿಗೆ ಕರೆಯಬೇಕೆಂದು ನಿಯಮ ಇದೆ ಎಂದರೆ ನಿಜ. ಚಾಸಾ-9 ಮತ್ತು 10 ಇಬ್ಬರೂ ಸಹ ಹಾಸನ ಜಿಲ್ಲೆಯ ವ್ಯಕ್ತಿಗಳು ಎಂದರೆ ನಿಜ. ಸ್ಥಳೀಯ ನಿವಾಸಿಗಳನ್ನು ನಾನು ಕರೆಯಲು ಪ್ರಯತ್ನ ಮಾಡಿಟ್ಟ ಕಾರಣ ಚಾಸಾ-9 ಮತ್ತು 10 ಸ್ಥಳದಲ್ಲಿಯೇ ಆ ಸಮಯದಲ್ಲಿ ಇದ್ದರು. ಚಾಸಾ-1 ಮತ್ತು ಆಕೆಯ ಸಹೋದರ ಚಾಸಾ-4 ರವರು ಸಾಕ್ಷಿಗಳನ್ನು ಆ ಸಮಯದಲ್ಲಾಗಲೇ ಸೇರಿಸಿ ತಯಾರು ಮಾಡಿಕೊಂಡಿದ್ದರು ಮತ್ತು ನಾನು ಅವರ ಮಾತುಕೇಳಿಕೊಂಡು ಸುಳ್ಳು ದಾಖಲೆಯನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ ಮತ್ತು ಸ್ಥಳದಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಅದನ್ನು ಠಾಣೆಯಲ್ಲಿಯೇ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ವಯಸ್ಸು ಮತ್ತು ಆರೋಗ್ಯದ ಬಗ್ಗೆ ನಾನು ಕೇಳಿ ತಿಳಿದುಕೊಂಡಿದ್ದೆ. ಆ ಸಮಯದಲ್ಲಿ ಆರೋಪಿತರ ವಯಸ್ಸು ಕ್ರಮವಾಗಿ 56,70,50,45 ವರ್ಷ ವಯಸ್ಸಾಗಿತ್ತು. ಚಾಸಾ-1 ಮತ್ತು ಆರೋಪಿ1 ಒಂದು ಮನೆಯಲ್ಲಿ ಮತ್ತು ಉಳಿದ ಆರೋಪಿತರು ಪಕ್ಕದ ಮನೆಯಲ್ಲಿ ವಾಸಿಸುತ್ತಿದ್ದರು

ಎಂದು ತಿಳಿದು ಬಂತು. ನಾನು ಸುಳ್ಳು ದೂರನ್ನು ಸೃಷ್ಟಿ ಮಾಡಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಹೇಳಿಕೆಗಳನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಅದರ ಆಧಾರದ ಮೇಲೆ ಚಾಸಾ-1 ರವರ ಒತ್ತಾಯದ ಮೇರೆಗೆ ನಮ್ಮ ಹಿರಿಯ ಅಧಿಕಾರಿಗಳಿಗೆ ಮನವಿ ಪತ್ರವನ್ನು ಆರೋಪಿ 1 ರವರಿಗೆ ಬಂಧಿಸಲೇಬೇಕೆನ್ನುವ ಉದ್ದೇಶದಿಂದ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನೋಟೀಸಿಗೆ ಉತ್ತರ ನೀಡಲು ಬಂದಾಗ ಆತನನ್ನು ಉತ್ತರ ನೀಡಲು ಅವಕಾಶ ನೀಡದೆ ಠಾಣೆಯಲ್ಲಿಯೇ ಬಂಧಿಸಿದ್ದೇನೆ ಎಂದರೆ ಸರಿಯಲ್ಲ. ಆತನಿಗೆ ಒಂದೇ ದಿನದಲ್ಲಿ ನೋಟೀಸು ಕೊಟ್ಟು 2 ಗಂಟೆಗಳ ಅವಧಿ ಒಳಗೆ ಬಂಧಿಸಿರುವ ಕಾರಣ ಅವನಿಗೆ ಸಮಾಜದಲ್ಲಿ ಗೌರವಕ್ಕೆ ಧಕ್ಕೆ ಆಗಿದೆ ಎಂದರೆ ಸರಿಯಲ್ಲ. ಆತನು ಬಡಪೂಜಾರಿ ಆಗಿರುವ ಕಾರಣ ಆತನ ವೇತನಕ್ಕೂ ಸಹ ತೊಂದರೆ ಆಗಿದೆ ಎಂದರೆ ಸರಿಯಲ್ಲ. ಚಾಸಾ-1 ಮತ್ತು ಆತನ ಸಹೋದರನ ಮಾತುಕೇಳಿಕೊಂಡು ಆರೋಪಿತರು ತಪ್ಪು ಮಾಡದೇ ಇದ್ದರೂ ಮೇಲ್ನೋಟಕ್ಕೆ ಯಾವುದೇ ಆರೋಪ ಕಂಡು ಬಂದಿಲ್ಲವಾದರೂ ಈ ರೀತಿ ಸುಳ್ಳು ಪ್ರಕರಣವನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

**(R.O.A & I.C.)**

**(Mohamed Arifulla C.F)**
SENIOR CIVIL JUDGE JMFC,
TIPTUR